# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2404922
E-mail : aeehtgmys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ.
ಮೈಸೂರು.

ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ/2020-21 406-408

ದಿನಾಂಕ : 20.06.2020

## ಸಭಾ ನಡಾವಳಿ

**ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ : 16.06.2020 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯನ್ನು ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.**

**ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-**

1. ಶ್ರೀಯುತ ಚಿಕ್ಕಸಿದ್ದೇಗೌಡರು ರವರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ, ವಿ.ವಿ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಉಮೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು.
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ರಾಘವೇಂದ್ರ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ.
7. ಶ್ರೀ ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.
8. ಶ್ರೀ. ಸೋಮಶೇಖರ್, ಕಿರಿಯ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ.
9. ಶ್ರೀ ಶಿವಪ್ರಸಾದ್, ಕಿರಿಯ ಇಂಜಿನಿಯರ್(ವಿ), ರೂಪನಗರ ಶಾಖೆ
10. ಶ್ರೀ ಪುಟ್ಟರಾಜ, ಸಹಾಯಕ ಲೆಕ್ಕಾಧಿಕಾರಿ, ಹೂಟಗಳ್ಳಿ ಉಪವಿಭಾಗ

**ಸಭೆಗೆ ಹಾಜರಿದ್ದ ಜನರು** : ಸಭೆಗೆ ಜನರು ಹಾಜರಾಗಿರುವುದಿಲ್ಲ.

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿ ಹಾಗೂ ನೌಕರರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ದಿನಾಂಕ : 06.02.2020 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ದೂರುಗಳು : 0

ದಿನಾಂಕ : 16.06.2020 ರಂದು ಸ್ವೀಕೃತವಾದ ದೂರಿನ ಸಂಖ್ಯೆ : 0

...2...

ದಿನಾಂಕ : 16.06.2020 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ನಡೆದ ಜನಸಂಪರ್ಕ ಸಭೆಯಲ್ಲಿ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ.

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉಪವಿಭಾಗದ ಜನಸಂಪರ್ಕ ಸಭೆಯಲ್ಲಿ ಯಾವುದೇ ಜನರು ಇಲ್ಲದಿದ್ದ ಕಾರಣ ಸಭೆಯನ್ನು ಉದ್ದೇಶಿಸಿ, ಎಲ್ಲಾ ಶಾಖಾಧಿಕಾರಿಗಳಿಗೆ ತಮ್ಮ ವ್ಯಾಪ್ತಿಯಲ್ಲಿ ನವೀಕರಿಸಿದ ಫೀಡರ್‌ನ ನಕ್ಷೆಯನ್ನು ಸಲ್ಲಿಸಲು ತಿಳಿಸಿರುತ್ತಾರೆ. ಹಾಗೂ ತಮ್ಮ ಶಾಖಾ ವ್ಯಾಪ್ತಿಯಲ್ಲಿ ಕಬ್ಬಿಣದ ಕಂಬ ಹಾಗೂ ತಾಮ್ರದ ತಂತಿ ಇದ್ದಲ್ಲಿ ಕೂಡಲೇ ಅದನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ.

ಮುಂದುವರೆದು ಎಲ್ಲಾ ಶಾಖಾಧಿಕಾರಿಯವರಿಗೆ, ತಮ್ಮ ಶಾಖೆಯಲ್ಲಿ ಪ್ರತಿ ದಿನ ಎರಡು ಪರಿವರ್ತಕಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ತಿಳಿಸಿರುತ್ತಾರೆ. ಹಾಗೂ ತಮ್ಮ ಶಾಖಾ ವ್ಯಾಪ್ತಿಯಲ್ಲಿ ಅಧಿಕ ಭಾರದೊತ್ತಡದ ಫೀಡರ್ ಇದ್ದಲ್ಲಿ ಭಾರವನ್ನು ಕಡಿತಗೊಳಿಸಿ, ನೂತನ ಫೀಡರ್‌ಗೆ ಅಂದಾಜುಪಟ್ಟಿಯನ್ನು ತಯಾರಿಸಲು ಸೂಚಿಸಿರುತ್ತಾರೆ. RAPDRP ವ್ಯಾಪ್ತಿಯ ಅನಧಿಕೃತ ಐ.ಪಿ. ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನೀಡುವ ಸಂಧರ್ಭದಲ್ಲಿ ALMU ಯೂನಿಟ್‌ಗಳನ್ನು ಕಡ್ಡಾಯವಾಗಿ ಅಳವಡಿಸಲು ಸೂಚಿಸಿರುತ್ತಾರೆ. ಹಾಗೂ ಶಾಖಾಧಿಕಾರಿಗಳಿಗೆ ಕೆಲಸ ನಿರ್ವಹಿಸುವಾಗ ಮೊದಲು ಸುರಕ್ಷಿತ ಕ್ರಮ ಕೈಗೊಂಡು ಕಾರ್ಯನಿರ್ವಹಿಸುವುದು ಮತ್ತು ಸುರಕ್ಷಿತ ಸಾಮಗ್ರಿಗಳನ್ನು ಸಿಬ್ಬಂದಿಗಳಿಗೆ ವಿತರಿಸಿ ಸುರಕ್ಷತೆ ಬಗ್ಗೆ ತಿಳಿಸಲು ಸೂಚಿಸಿದ್ದರು.

ಮುಂದುವರೆದು, ಅಧಿಕಾರಿಗಳಿಗೆ ಗ್ರಾಹಕರ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ, ಸಮಸ್ಯೆಗಳನ್ನು ಪರಿಹರಿಸಿ ಮತ್ತು ಸೇವೆಯನ್ನು ಉನ್ನತೀಕರಿಸಲು ಉತ್ತಮ ಸಲಹೆ ನೀಡಲು ಸೂಚಿಸಿದರು. ಹಾಗೂ ಭಾಗವಹಿಸಿದ ಎಲ್ಲಾ ಅಧಿಕಾರಿಯವರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ